ಚಾಸಾಃ 05
ಫ್ರಾಸಾಃ 03

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶಿಡ್ಲಘಟ್ಟ.

ಸಿಸಿ ಸಂಖ್ಯೆ: 47/2024

ದಿನಾಂಕಃ 19.08.2026 ರಂದು ಸಾಕ್ಷಿಗೆ ಪ್ರಮಾಣ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ | : | ಜಮೀರ್ ಪಾಷ |
| ತಂದೆಯ ಹೆಸರು | : | ಖಾಸಿಂ ಸಾಬ್ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಶಿಡ್ಲಘಟ್ಟ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಆರೋಪಿಗಳು ಗೊತ್ತಿಲ್ಲ. ಸಾಕ್ಷಿಗೆ ಈಗ ಅಂಗ ಶೋಧನೆಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-13(ಬಿ) ಗುರುತಿಸಿದ್ದು, ಅದರಲ್ಲಿ ಏು ವಿಚಾರ ಬರೆದಿದೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ 11 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನಿಪಿ-11(ಬಿ) ಗುರುತಿಸಿದ್ದು, ಅದರಲ್ಲಿ ಏನು ವಿಚಾರ ಬರೆದಿದೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ 14 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನಿಪಿ-14(ಬಿ) ಗುರುತಿಸಿದ್ದು, ಅದರಲ್ಲಿ ಏನು ವಿಚಾರ ಬರೆದಿದೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ 15 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನಿಪಿ-15(ಬಿ) ಗುರುತಿಸಿದ್ದು, ಅದರಲ್ಲಿ ಏನು ವಿಚಾರ ಬರೆದಿದೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಪಂಚನಾಮೆಯನ್ನು ಮಾಡಿಲ್ಲ .

2. ಈಗ 3 ವರ್ಷಗಳ ಹಿಂದೆ ನಾನು ಠಾಣೆಯ ಬಳಿ ಹೋದಾಗ ಅಲ್ಲಿ ನನ್ನ ಸಹಿಗಳನ್ನು ಪಡೆದಿದ್ದರು ಹಾಗೂ ಪೋಲಿಸರವರು ನನ್ನನ್ನು ಕರೆದುಕೊಂಡು ಹೋಗಿ ಕೆಲವು ಸ್ಥಳದಲ್ಲಿ ಭಾವ ಚಿತ್ರಗಳನ್ನು ಸಹ ತೆಗೆಸಿದ್ದರು, ಯಾವ ವಿಚಾರಕ್ಕೆಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಎಪಿಪಿಯವರಿಂದಃ</u>

3. ದಿನಾಂಕ 10.10.2023 ರಂದು ಬೆಳಗಿನ ಜಾವ 1.00 ಗಂಟೆ ಸಮಯದಲ್ಲಿ ಆರೋಪಿಗಳು ಕೆಎ-ಇಇ-7783 ನೊಂದಣಿ ಸಂಖ್ಯೆಯ ಡಿಯೋ ದ್ವಿಚಕ್ರ ವಾಹನ ಮತ್ತು ಕೆಎ-02-ಪಿ-2931 ನೊಂದಣಿ ಸಂಖ್ಯೆಯ ಇಂಡಿಕಾ ಕಾರ್ ನಲ್ಲಿ ಬಂದು ಶಿಡ್ಲಘಟ್ಟ ನಗರ ಪೋಲಿಸ್ ಠಾಣಾ ನಗರದ ಸರಹದ್ದಿನ ಸಂತೋಷ್ ನಗರದಲ್ಲಿರುವ ಚಾಸಾ 1 ರವರ ಬಾಬ್ತು ರೇಷ್ಮೆ ಗೋಡೌನ್ ನ ಕಿಟಕಿಯ ಕಂಬಿಯನ್ನು ಮುರಿದು ಅತೀಕ್ರಮವಾಗಿ ಒಳಗೆ ಪ್ರವೇಶ ಮಾಡಿ ಆ ನಂತರ ಗೋಡೌನ್ ನಲ್ಲಿದ್ದ ರೂ. 27,500/- ಬೆಲೆ ಬಾಳುವ 25 ಕೆ ಜಿ ಸಿಲ್ಕ್ ವೇಸ್ಟ್, ರೂ. 2,11,200/- ಬೆಲೆ ಬಾಳುವ 220 ಕೆ ಜಿ ಸಿಲ್ಕ್ ಶೀಟ್, ರೂ. 36,000/- ಬೆಲೆ ಬಾಳುವ 45 ಕೆ ಜಿ ಯೆಲ್ಲೋ ಸಿಲ್ಕ್ ಶೀಟ್ ಒಟ್ಟು ರೂ. 2,74,700/- ಬೆಲೆ ಬಾಳುವ ಮಾಲನ್ನು ಕಳ್ಳತನ ಮಾಡಿ ಚಾಸಾ 7 ಮತ್ತು 8 ರವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರದ ಸಂಬಂಧವಾಗಿ ದಿ. 21-10-2023 ರಂದು ನಿಪಿ 11 ರಂತೆ ಮಾಲು ಅಮಾನತು ಪಂಚನಾಮೆಯನ್ನು ನನ್ನ ಮತ್ತು ಇತರರ ಸಮಕ್ಷಮ ಕೈಗೊಂಡು ಅದರಂತೆ ರೂ. 38400 ಬೆಲೆ ಬಾಳು 40 ಕೆ ಜಿ ತೂಕದ ರೇಷ್ಮೇ ಶೀಟ್ ಗಳನ್ನು ಸೈಯದಿ ಗುಲ್ಜಾರ್ ಅಹಮದ್ ರವರ ಗೌಡನ್ ಬಳಿ ಅಮಾನತು ಮಾಡಿದ್ದರು ಎಂದರೆ ಸರಿಯಲ್ಲ. ಆ ಗೌಡನ್ ನ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದ ಒಂದು ಕಾರ್ ಮತ್ತು ದ್ವಿಚಕ್ರ ವಾಹನವನ್ನು ಆರೋಪಿಗಳು ತೋರಿಸಿದ ಮೇರೆಗೆ ಅವುಗಳನ್ನು ಸಹ ಅಮಾನತು ಮಾಡಿದ್ದರು ಎಂದರೆ ಸರಿಯಲ್ಲ. ಕಾರ್ ನಂ. ಕೆಎ-02-ಪಿ-2931 ಮತ್ತು ದ್ವಿಚಕ್ರ ವಾಹನ ನಂ. ಕೆಎ-50-ಇಇ-7783 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ

ಕಡತದಲ್ಲಿರುವ ಸದರಿ ಕಾರು ಮತ್ತು ದ್ವಿಚಕ್ರ ವಾಹನದ ಭಾವ ಚಿತ್ರವನ್ನು ತೋರಿಸಲಾಗಿ ಅದರಂತೆ ಅವುಗಳನ್ನು ಅಮಾನತು ಮಾಡಿದ್ದರು ಎಂದರೆ ಸರಿಯಲ್ಲ.

4. ದಿ. 21-10-2023 ರಂದು ಪೋಲಿಸ್ ಇನ್ಸಪೆಕ್ಟರ್ ರವರ ಕಚೇರಿಯಲ್ಲಿ ಬೆಳಿಗ್ಗೆ 07.00 ರಿಂದ 7.30 ಗಂಟೆಯವರೆಗೆ ಆರೋಪಿಗಳ ಅಂಗಶೋದನೆ ಪಂಚನಾಮೆಯನ್ನು ನಿಪಿ-13 ರಂತೆ ಕೈಗೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿಯ ಪ್ಯಾಂಟ್ ಜೇಬಿನಿಂದ ರೂ. 500 ಮುಖ ಬೆಲೆಯ ನೋಟುಗಳು ಅಂದರೆ ಒಟ್ಟು 70 ಸಾವಿರ ರೂಗಳನ್ನು ಹಾಗೂ 2 ನೇ ಆರೋಪಿ ಪ್ಯಾಂಟ್ ಜೇಬಿನಿಂದ ರೂ. 500 ಮುಖ ಬೆಲೆಯ ನೋಟುಗಳು ಅಂದರೆ ಒಟ್ಟು 50 ಸಾವಿರ ರೂಗಳನ್ನು ಅಂದರೆ ಒಟ್ಟು ರೂ. 1,20,000/- ಹಣವನ್ನು ಅಮಾನತು ಮಾಡಿದ್ದರು ಎಂದರೆ ಸರಿಯಲ್ಲ. ನಾನು ಆ ಬಗ್ಗೆ ವಿಚಾರಗಳನ್ನು ತಿಳಿದು ಅಲ್ಲೆ ಸಹಿಯನ್ನು ಮಾಡಿದೆ ಎಂದರೆ ಸರಿಯಲ್ಲ.

5. ದಿ. 21-10-2023 ರಂದು ಚಿಕ್ಕಬಳ್ಳಾಪುರ ನಗರದ ಬುದ್ಧ ಸರ್ಕಲ್ ನಲ್ಲಿರುವ ಖಲೀಲ್ ರವರ ಬಾಡಿಗೆ ವಾಸವಾಗಿರುವ ಮನೆಯ ಮುಂಭಾಗ ಮಧ್ಯಾಹ್ನ 2.00 ರಿಂದ 3.00 ಗಂಟೆಯವರೆಗೆ ನಿಪಿ 14 ರಂತೆ ಅಮಾನತು ಪಂಚನಾಮೆಯನ್ನು ಕೈಗೊಂಡಿದ್ದರು ಎಂದರೆ ಸರಿಯಲ್ಲ. ಆಗ 33 ಕೆ ಜಿ ತೂಕದ ಸುಮಾರು 31,680/- ಬೆಲೆ ಬಾಳುವ ಸಿಲ್ ಶೀಟ್ ಗಳನ್ನು ಅಮಾನತು ಮಾಡಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ಪೋಲಿಸರಿಗೆ ಸದರಿ ಮನೆಯಲ್ಲಿ ಇಟ್ಟಿದ್ದ ಸಿಲ್ಕ ತೋರಿಸಿದ ಮೇರೆಗೆ ಅಮಾನತು ಮಾಡಿದ್ದರು ಎಂದರೆ ಸರಿಯಲ್ಲ. ನಿಪಿ-5 ರಿಂದ ನಿಪಿ-8 ರಲ್ಲಿ ಸದರಿ ಅಮಾನತುಪಡಿಸಿದ ಸಿಲ್ಕ ಶೀಟ್ ಗಳು ಮತ್ತು ಹಣ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

6. ದಿ. 21-10-2023 ರಂದು ಸದರಿ ಇಲಾಹಿ ನಗರದಲ್ಲಿರುವ ಹಮೀದರವರ ವಾಸದ ಮನೆಯ ಬಳಿ ಮಧ್ಯಾಹ್ನ 12.45 ರಿಂದ 1.30 ಗಂಟೆಯವರೆಗೆ ನಿಪಿ 15 ರಂತೆ

ಮಾಲು ಅಮಾನತು ಪಂಚನಾಮೆಯನ್ನು ಕೈಗೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 52 ಕೆ ಜಿ ತೂಕದ ಸುಮಾರು 49,920 ಬೆಲೆ ಬಾಳುವ ಸಿಲ್ಕ ಶೀಟ್ ಗಳನ್ನು ಅಮಾನತು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು 2 ನೇ ಆರೋಪಿ ಪೋಲಿಸರೊಂದಿಗೆ ಬಂದು ತಿಳಿಸಿದ ಮೇಲೆ ಅಮಾನತು ಮಾಡಿದ್ದರು ಎಂದರೆ ಸರಿಯಲ್ಲ. ನಿಪಿ-16 ಮತ್ತು ನಿಪಿ-17 ರಲ್ಲಿ ಸದರಿ ಅಮಾನತುಪಡಿಸಿದ ಶೀಟ್ ಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ನಿಪಿ-11 ರಿಂದ 15 ರ ಪಂಚನಾಮೆಗಳ ಕಾಲದಲ್ಲಿ ಹಾಜರಿದ್ದು ಅವುಗಳ ವಿಚಾರವನ್ನು ತಿಳಿದುಕೊಂಡು ಸಹಿ ಮಾಡಿದ್ದರು ಕೂಡ ಆರೋಪಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಮಾನತು ಪಂಚನಾಮೆ ಕಾಲದಲ್ಲಿ ಮೇಲೆ ಹೇಳಿದ ಭಾವ ಚಿತ್ರಗಳನ್ನು ಸಹ ನನ್ನ ಸಮಕ್ಷಮ ತೆಗೆಸಿದ್ದರು ಎಂದರೆ ಸರಿಯಲ್ಲ. ಆರೋಪಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ವಕೀಲರಿಂದಃ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇ ಕೇ ಸರಿ ಇದೆ

(ಮಹಮ್ಮದ್ ರೋಷನ್ ಷಾ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಡ್ಲಘಟ್ಟ.